ಸಭೆಯು ತನ್ನ ಒಪ್ಪಿಗೆ ನೀಡಿದೆ. ಕೇಂದ್ರ ಸರ್ಕಾರದಿಂದ ಶೀಘ್ರದಲ್ಲಿಯೇ ಒಪ್ಪಿಗೆ ಬರುವ ನಿರೀಕ್ಷೆ ಇದೆ. ಏತನ್ಮಧ್ಯೆ ಕರ್ನಾಟಕ ಸರ್ಕಾರವು ಸರ್ಕಾರಿ ಆದೇಶ ಸಂಖ್ಯೆ : ನಇ 144 ಪಿಆರ್‌ಜೆ 2001 ದಿನಾಂಕ: 24.03.2005 ರಲ್ಲಿ ಬೆಂಗಳೂರು ಮೆಟ್ರೋ ರೈಲು ಯೋಜನೆಯ ಹಂತ–1 ರ ಅನುಷ್ಠಾನಕ್ಕಾಗಿ ರೂ.5605/– ಕೋಟಿ ರೂ.ಗಳ ಪರಿಷ್ಕೃತ ಅಂದಾಜು ವೆಚ್ಚಕ್ಕೆ ಅನುಮೋದನೆ ನೀಡಿದೆ. ಪ್ರಾಥಮಿಕ ಕಾರ್ಯಗಳಾದಂತಹ ಯೋಜನೆ ಹಾಗೂ ವಿನ್ಯಾಸ, ಭೂ ಸ್ವಾಧೀನ ಪಡಿಸಿಕೊಳ್ಳಲು ಸಿದ್ಧತೆ, ಬಳಕೆ ಸೇವೆಗಳ ಸ್ಥಳಾಂತರ, ಇತ್ಯಾದಿ ಆರಂಭಿಕ ಕೆಲಸಗಳನ್ನು ಕೈಗೊಳ್ಳುವುದರೊಂದಿಗೆ ಮುಂದುವರಿಯಲು ಬಿ.ಎಂ.ಆರ್.ಟಿ.ಎಲ್.ಗೆ ಸರ್ಕಾರದ ಅನುಮತಿಯನ್ನು ಸಹ ನೀಡಿದೆ. ಇದುವರೆವಿಗೆ ರಕ್ಷಣಾ ಇಲಾಖೆಯ ಜಮೀನನ್ನು ಸ್ವಾಧೀನಪಡಿಸಿ ಕೊಂಡಿರುವುದೂ ಸೇರಿ ಈ ಯೋಜನೆಗೆ ಒಟ್ಟು 42.47 ಕೋಟಿ ರೂ. ಖರ್ಚಾಗಿರುತ್ತದೆ.

ಊ) ಈ ಯೋಜನೆಯನ್ನು ಅನುಷ್ಠಾನ ಗೊಳಿಸಲು ರಾಜ್ಯ ಸರ್ಕಾರ ಸಂಪೂರ್ಣವಾಗಿ ಬದ್ಧವಾಗಿದೆ.

ಋ) ಈ ಯೋಜನೆಯ ಕಾಮಗಾರಿಗಳು ಆಗಸ್ಟ್, 2005 ರಲ್ಲಿ ಕಾರ್ಯಾರಂಭ ವಾಗಲಿದ್ದು, ಅಕ್ಟೋಬರ್, 2010 ರ ವೇಳೆಗೆ ಪೂರ್ಣಗೊಳ್ಳುವ ನಿರೀಕ್ಷೆ ಇದೆ.

3557 (3793) ಶ್ರೀ ಕಟ್ಟಾ ಸುಬುಮಣ್ಯ ನಾಯ್ಡು (ಶಿವಾಜಿನಗರ) – ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರಿನ ದಂಡು ರೈಲ್ವೆ ನಿಲ್ದಾಣ ಹಾಗೂ ಮಾಧವ ನಗರದ ಬಳಿ ರೈಲ್ವೆ ಕೆಳ ಸೇತುವೆ ಕಾಮಗಾರಿಗಳನ್ನು ಎಂದು ಪ್ರಾರಂಭಿಸಲಾಯಿತು ?

ಆ) ಇವುಗಳ ಅಂದಾಜು ವೆಚ್ಚವೆಷ್ಟು ಹಾಗೂ ಇಲ್ಲಿಯವರೆಗೆ ಇವುಗಳ ನಿರ್ಮಾಣಕ್ಕಾಗಿ ಖರ್ಚು ಮಾಡಿದ ಹಣವೆಷ್ಟು ?

ಇ) ಈ ಕಾಮಗಾರಿಗಳೂ ಯಾವಾಗ ಪೂರ್ಣಗೊಳ್ಳಬೇಕಾಗಿತ್ತು?

ಈ) ಈ ಕಾಮಗಾರಿಗಳು ಪೂರ್ಣಗೊಳ್ಳಲು ವಿಳಂಬವಾಗುತ್ತಿರುವುದಕ್ಕೆ ಕಾರಣಗಳೇನು ?

ಉ) ಈ ಕಾಮಗಾರಿಗಳು ಯಾವಾಗ ಪೂರ್ಣಗೊಳ್ಳುವುವು ?

ಶ್ರೀ ಧರ್ಮಸಿಂಗ್ (ಮಾನ್ಯ ಮುಖ್ಯಮಂತ್ರಿಗಳು) –

1. ದಂಡು ರೈಲ್ವೆ ನಿಲ್ದಾಣದ ಬಳಿ ರೈಲ್ವೆ ಕೆಳಸೇತುವೆ ಕಾಮಗಾರಿಯ ಪ್ರಾರಂಭಿಕ ದಿನಾಂಕ:ಫೆಬ್ರವರಿ2004.

2. ಮಾಧವನಗರ ರೈಲ್ವೆ ಕೆಳ ಸೇತುವೆ ಕಾಮಗಾರಿಯ ಪ್ರಾರಂಭಿಕ ದಿನಾಂಕ: ನವೆಂಬರ್ 2003.

1) ಅ) ದಂಡು ರೈಲ್ವೆ ನಿಲ್ದಾಣದ ಬಳಿ ರೈಲ್ವೆ ಕೆಳಸೇತುವೆ ಕಾಮಗಾರಿ ಅಂದಾಜು ವೆಚ್ಚ ರೂ.337.00 ಲಕ್ಷಗಳು

ಆ) ಈ ಯೋಜನೆಗೆಇದುವರೆವಿಗೂ ತಗಲಿರುವ ವೆಚ್ಚ ರೂ.265.00 ಲಕ್ಷಗಳು.

2.ಅ) ಮಾಧವನಗರ ರೈಲ್ವೆ ಕೆಳಸೇತುವೆ ಕಾಮಗಾರಿ ಅಂದಾಜು ವೆಚ್ಚ ರೂ.218.75 ಲಕ್ಷ.

ಆ) ಯೋಜನೆಗೆ ಇದುವರೆವಿಗೂ ತಗಲಿರುವ ವೆಚ್ಚ ರೂ.226.38 ಲಕ್ಷಗಳು.

ಇ) 1. ದಂಡು ರೈಲ್ವೆ ನಿಲ್ದಾಣದ ಬಳಿರೈಲ್ವೆ ಕೆಳಸೇತುವೆ ಕಾಮಗಾರಿಯುನವೆಂಬರ್ 2004 ರಲ್ಲಿಪೂರ್ಣಗೊಳ್ಳಬೇಕಾಗಿತ್ತು.

2. ಮಾಧವನಗರ ರೈಲ್ವೆ ಕೆಳಸೇತುವೆ ಕಾಮಗಾರಿಯು ಅಕ್ಟೋಬರ್ 2004 ರಲ್ಲಿ ಪೂರ್ಣಗೊಳ್ಳಬೇಕಾಗಿತ್ತು.

ಈ) ಕಾಮಗಾರಿಗಳೂ ಪೂರ್ಣಗೊಳ್ಳಲು ವಿಳಂಬವಾಗಿರುವುದಕ್ಕೆ ಭೂಸ್ವಾಧೀನ, ವಾಹನ ಸಂಚಾರಕ್ಕೆಬದಲಿ ರಸ್ತೆ ಕೇಬಲ್, ಕೊಳವೆಗಳ ಸ್ಥಳಾಂತರ ಮತ್ತು ತಾಂತ್ರಿಕ ವಿನ್ಯಾಸದಲ್ಲಿನ ಚಲಾವಣೆ ಹಾಗೂ ರೈಲ್ವೆ ಇಲಾಖೆಯ ವೇಗ ನಿಯಂತ್ರಣ ಅನುಮತಿ.

ಉ) 1. ದಂಡು ರೈಲ್ವೆ ನಿಲ್ದಾಣದ ಬಳಿ ರೈಲ್ವೆ ಕೆಳಸೇತುವೆ ಕಾಮಗಾರಿಯು ಪೂರ್ಣಗೊಳ್ಳಲು ಬೇಕಾಗಿರುವ ಉದ್ದೇಶಿತ ದಿನಾಂಕ: ಜುಲೈ2005.

2. ಮಾಧವನಗರ ರೈಲ್ವೆ ಕೆಳಸೇತುವೆ ಕಾಮಗಾರಿಯು ಪೂರ್ಣಗೊಳ್ಳಲು ಬೇಕಾಗಿರುವ ಉದ್ದೇಶಿತ ದಿನಾಂಕ:ಜುಲೈ 2005.

3558 (3794) ಶ್ರೀ ಕಟ್ಟಾ ಸುಬುಮಣ್ಯ ನಾಯ್ಡು (ಶಿವಾಜಿನಗರ) – ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?